ಹಾದು ಬರುವ ನೀರವ ದಾರಿಯ ಗುಂಟ ನಮ್ಮೂರಿಗೆ ಅಲೆಮಾರಿಗಳ ತಿರುಗಾಟವಿರುತ್ತಿತ್ತು. ದಾರಿಯುದ್ದಕ್ಕೂ ಪರಿಮಳ ಹಂಚುವ ರಾಜಾರಾಮು, ಜಾದುಗಾರ ಸುಬ್ಬ. ಬಳೆ ಗೌರಿ, ಹಾವುಗೊಲ್ಲರ ಯಂಕ್ಟ, ಕಲಘಟಗಿಯಿಂದ ಕುದುರೆ ಸವಾರಿಯಲ್ಲಿ ದಿನಸಿ ಮಾರುವ ಕರೀಂ ಸಾಬ್, ಸುಡುಗಾಡು ಅಗ್ಗಾಸಿ ಸಿದ್ದ, ಬಿಡಾರದಲ್ಲಿ ಉಳಿಯುತ್ತಿದ್ದ ನಾಯಕ ಮಾಸ್ತರು, ದನದ ಸಂತೆಯ ಈಶ್ವರಪ್ಪ, ಬಾಲ ವಿಧವೆ ಕರಿಪಾತಿ, ಹಕ್ಕಿ ನರಸಣ್ಣ, ತೀರ್ವೆ ನೋಟಿಸ್ ನೀಡುವ ಉಗ್ರಾಣಿ, ಇಂಗು, ಪಟ್ಟೆನೂಲು, ಜನಿವಾರ, ಕರ್ಪೂರದ ಬಟವೆ ಜತೆಗೆ ಬರುತ್ತಿದ್ದ ಕೋಟೆಗುಡ್ಡೆ ಭಟ್ಟರು, ಪುರಾಣ ಓದಲು ಬರುತ್ತಿದ್ದ ಗೋಕರ್ಣದ ಪುರೋಹಿತರು, ಕಂಬಳಿ ವ್ಯಾಪಾರದ ದುಂಡಯ್ಯ, ಪಿಯಾನೊ ನುಡಿಸುತ್ತಿದ್ದ ಹಾನಗಲ್ಲಿನ ಹಗಲು ವೇಷದ ನರಸಿಂಹ, ಸಾಮೂಹಿಕ ಕ್ಷೌರಕ್ಕೆ ಬರುತ್ತಿದ್ದ ಹಡಪದ ಮಾಬ್ಲ... ಎಲ್ಲ ನನ್ನ ಸಂವೇದನೆಯನ್ನು ನೇಯ್ದ ನಿರಕ್ಷರ ನೇಕಾರರು. ಊರಿನ ಕೊನೆಯ ಮನೆಯಾದ್ದರಿಂದ ಹಲವರು ನಮ್ಮ ಮನೆಯಲ್ಲಿ ವಸತಿ ಮಾಡುತ್ತಿದ್ದರು. ಊಟವಾಗಿ, ಮಲಗಲು ಹಾಸಿಗೆ ಬಿಡಿಸುವ ತನಕ ಚಿಮಣಿ ದೀಪದ ಬೆಳಕಿನಲ್ಲಿ ಅವರ ಮಾತುಕತೆ ಇರುತ್ತಿತ್ತು.

◆ **ಮಕ್ಕಳೂ ಕೇಳುತ್ತಿದ್ದರೆ ಅವರ ಮಾತುಕತೆಯನ್ನು?**

ಹೌದು, ಹಾಗಿರುತ್ತಿತ್ತು ಅವರ ಮೋಹಕ ನಿರೂಪಣೆ. ಅರೆ ಎಚ್ಚರದ ಅಮಲಿನಲ್ಲಿ ಅವರ ಮಾತನ್ನು ಆಲಿಸುತ್ತ ಕತ್ತಲಲ್ಲಿ ಈಜುವ ಮಿಂಚು ಹುಳಗಳ ಹಿಂದೆ ಕನಸಿಗೆ ಜಾರುತ್ತ ರೋಚಕ ಮಾಯಾ ಪ್ರಪಂಚವನ್ನು ಹೊಕ್ಕು ಬಿಡುತ್ತಿದ್ದೆ. ಅವರ ಕತೆಗೆ ಹೂಂಗುಡುತ್ತಿದ್ದ ನಿಶ್ಯಬ್ದ ಕಾಡು, ದೂರದಲ್ಲೆಲ್ಲೊ ಹೂಂಕರಿಸುವ ಗೂಬೆ, ಜಗಲಿಯ ನಡುವೆ ಮೈ ಡೊಂಕಿನ ವಯ್ಯಾರದ ಚಿಮಣಿ ದೀಪದ ಹೊಗೆ, ಚಿಟ್ಟೆಯ ಅಂಚಿನಲ್ಲಿ ನರಳುವ ರಾತ್ರಿ, ನಿರಾಳ ಚೆಲ್ಲಿದ ನಿರ್ಲಿಪ್ತ ಬೆಳದಿಂಗಳು, ಮನೆಯೊಳಗಿನ ಮೌನ ಅವರ ನಿರೂಪಣೆಯನ್ನು ನಿಜಗೊಳಿಸುತ್ತಿದ್ದವು. ಈ ಆಗಂತುಕ ಅಲೆಮಾರಿಗಳೇ ನನ್ನ ಕತೆಗಳ ಪಾತ್ರಗಳಾದದ್ದು ಸಹಜವಾಗಿತ್ತು.

◆ **'ನಿರೂಪಣೆಯನ್ನು ನಿಜಗೊಳಿಸುವುದು' ಅಂದರೆ?**

ಕತೆ ನಿಜವಾಗಿ ನಡೆದಿದೆಯೊ ಇಲ್ಲವೊ ಎಂಬುದು ಮುಖ್ಯವಲ್ಲ; ಆದರೆ, ಅದು ನಡೆದಿದೆ ಎಂದು ನಂಬುವಂತೆ ನಿರೂಪಿಸುವುದರಲ್ಲಿ ಕಥಾಭಾಷೆಯ ಯಶಸ್ಸು ಅಡಗಿದೆ ಎಂದು ಸ್ಪ್ಯಾನಿಶ್ ಲೇಖಕ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಹೇಳಿದ್ದು ಈ ನೆನಪಿನ ಚಿತ್ರಗಳಲ್ಲಿ ಹಲವು ವರ್ಷಗಳ ಬಳಿಕ ನಿಜವೆನಿಸಿದವು. ಆಡಿಕೊಳ್ಳಲು ಯಾರಿಲ್ಲದೆ ಒಬ್ಬಂಟಿಯಾದ ನನ್ನನ್ನು ಅಲೆಮಾರಿಗಳ ಮಿಶ್ರ ಕಥಾಶ್ರವಣವೇ ಬೇಸರ ಹುಟ್ಟಿಸುತ್ತಿದ್ದ ಪುರಾತನ ಭಗ್ನಾವಶೇಷದಂತಹ, ವಿಷಾದಪೂರ್ಣ ಮನೆಯ ಪರಿಸರದಿಂದಲೊ ಅಕಾಲ ವಿರಕ್ತಿಯಿಂದಲೊ ಅನಿರ್ವಚನೀಯ ಖಿನ್ನತೆಯಿಂದಲೊ ಪಾರು ಮಾಡಿದ್ದು ಎಂದನಿಸುತ್ತದೆ.

◆ **ಕತೆ ಹೊತ್ತು ತಂದವರೇ ಮತ್ತೊಂದು ಕತೆಯ ಪಾತ್ರವಾಗಿಬಿಡುವುದು ಕುತೂಹಲದ ವಿದ್ಯಮಾನ. ಕವಿ, ಜಾನಪದ ವಿದ್ವಾಂಸ ಎ.ಕೆ. ರಾಮಾನುಜನ್ ಒಂದೆಡೆ ಗಂಡಸರ ಕಥಾಕಾಲಕ್ಷೇಪದಲ್ಲಿ ಕಾಣಿಸಿಕೊಳ್ಳುವ ವಿಷಯಗಳಿಗೂ ಹೆಂಗಸರ ವಸ್ತುವಿಗೂ ವ್ಯತ್ಯಾಸವಿದೆ ಎನ್ನುತ್ತಾರೆ.**

ಭಿನ್ನವಾಗಿದ್ದೂ ಒಂದೆಡೆ ಸೇರುವ ನೋಟಗಳು ಅವು. ನನ್ನ ಪಾಲಿಗೆ ಈ ಕಥಾಕಾಲಕ್ಷೇಪ ಸುಖಕರವಾಗಿಯೇನೂ ಇದ್ದಿರಲಿಲ್ಲ; ನಸುಗೆಂಪು ಮುಸ್ಸಂಜೆ ಸಂಧಿಕಾಲದಲ್ಲಿ ಮತ್ತಷ್ಟು